# ಬಾನ ದಾರಿಯಲ್ಲಿ ಮೂಡಿಬಂದ ‘ಆಯುರ್’

ಆಯುರ್ವೇದ ತೈಲಗಳ ವರ್ಚಸ್ಸು ಬಿಸಿಯಾಗಿರುತ್ತದೆ. ನ್ಯಾನ್ಸಿ ಅದ್ಭುತವಾಗಿ ಮಸಾಜು ಮಾಡುತ್ತಿದ್ದಳು. ಅವಳ ಕೈಗಳು ಮಸಾಜಿನಲ್ಲಿ ಪಳಗಿದ್ದವು. ಶರೀರದ ಮೇಲೆ ಸರಿದಾಡುವ ಅವಳ ಕೈಗಳ ನಿಪುಣತೆಯಿಂದಾಗಿ ಎಂಥ ಆಯಾಸವೂ ಕ್ಷಣ ಮಾತ್ರದಲ್ಲಿ ದೂರವಾಗುತ್ತಿತ್ತು. ಅವಳು ಕಾಲುಗಳು ಮತ್ತು ಮೀನಖಂಡಗಳ ಸಂವೇದನಾ ಬಿಂದುಗಳ ಮೇಲೆ ಒತ್ತಡ ಉಂಟು ಮಾಡುತ್ತಿದ್ದಳು. ಸುಮಾರು ಐವತ್ತು ನಿಮಿಷಗಳ ಮಸಾಜಿನ ನಂತರ ಶರೀರಕ್ಕೆ ಆರಾಮದ ಅನುಭವವಾಯಿತು, ಈ ಅನುಭವ ಅದ್ಭುತವಾಗಿತ್ತು. ಒಳಗಿನ ಆಯಾಸ, ಜಡತ್ವ ಕರಗಿ ಹನಿಯಿತು. ನಾನು ಮೋಡಗಳ ಮೇಲೆ ಹಾರುತ್ತಿದ್ದೇನೆ ಎಂದು ಅನ್ನಿಸುತ್ತಿತ್ತು. ನಾನು ಈ ಮೊದಲೂ ಅನೇಕ ಪಾರ್ಲರ್‌ಗಳಲ್ಲಿ ಮಸಾಜು ಮಾಡಿಸಿಕೊಂಡಿದ್ದೆ. ಆದರೆ ನ್ಯಾನ್ಸಿಯ ಮಸಾಜ್ ಕೇಂದ್ರದಲ್ಲಿ ದೊರೆತ ಶಾಂತಿ, ಇದುವರೆಗೆ ಬೇರೆಲ್ಲೂ ಸಿಕ್ಕಿರಲಿಲ್ಲ.

ಮಸಾಜಿನ ನಂತರ ನನ್ನ ಜಿಡ್ಡಿನ ಶರೀರವನ್ನು ಸ್ಟೀಮ್ ಕ್ಯಾಬಿನೆಟ್‌ಗೆ ಕರೆದೊಯ್ಯಲಾಯಿತು. ನನ್ನನ್ನು ಆಪಾದಮಸ್ತಕ ಒಂದು ಬಾಕ್ಸ್‌ನಲ್ಲಿ ಮುಚ್ಚಿ, ಅದರೊಳಗೆ ಭಾಷ್ಪವನ್ನು ಹರಿಸಲಾಯಿತು. ಐದು ನಿಮಿಷಗಳ ಭಾಷ್ಪ ಸ್ನಾನದ ನಂತರ ಬಿಸಿ ನೀರಿನಿಂದ ಸ್ನಾನ ಮಾಡಿಸಲಾಯಿತು. ಇದರಿಂದ ನನ್ನ ಶರೀರದಲ್ಲಿ ತಾಜಾತನದ ಸಂಚಾರವಾಯಿತು.

ಓಹ್... ಆ ತಾಜಾತನ ನನ್ನನ್ನು ಮತ್ತೆ ಅಲ್ಲಿಗೆ ಹೋಗಲು ಪ್ರೇರೇಪಿಸಿತು. ಅಲ್ಲದೆ ಅವಳು ಕೊಡುತ್ತಿದ್ದ ತಾಜಾ ಹಣ್ಣು–ಎಲೆಗಳ ಹರ್ಬಲ್ ಡ್ರಿಂಕ್ ಅವರ್ಣನೀಯವಾಗಿತ್ತು. ಎರಡು ಸಿಟ್ಟಿಂಗ್ ನಂತರ, ನಾನು ಮೂರು ಪ್ಯಾಕೇಜ್‌ಗಳ ಮಸಾಜ್‌ಗೆ ಬುಕ್ ಮಾಡಿದೆ.

ನಾನು ಭಾರತದಲ್ಲಿ ಅನೇಕ ಬಾರಿ ಪ್ರವಾಸ ಮಾಡಿದ್ದೆ. ಆದರೆ ಆಯುರ್ವೇದದ ಮಸಾಜ್ ಬಗ್ಗೆ ನನ್ನಲ್ಲಿ ಉತ್ಸಾಹ ಜಾಗೃತಗೊಂಡಿರಲಿಲ್ಲ, ಕೇರಳಕ್ಕೆ ಹೋದಾಗಲೂ ಜಾಗೃತಗೊಂಡಿರಲಿಲ್ಲ. ಆದರೆ ನ್ಯಾನ್ಸಿಯ ಪಾರ್ಲರ್‌ನಲ್ಲಿ ದೊರೆತ ಮಸಾಜಿನ ಅನುಭವ ಸಾಕಷ್ಟು ಅದ್ಭುತವಾಗಿತ್ತು. ನಾಲ್ಕು ಮಸಾಜಿನ ನಂತರ, ನಾನು ನನ್ನಲ್ಲಿ ಸ್ಫೂರ್ತಿ ಉಕ್ಕುತ್ತಿರುವುದನ್ನು ಮನಗಂಡೆ. ನಿತ್ಯದ ಜಂಜಾಟದಿಂದ ದೂರವಾಗಿ ಒಂದು ಸುಂದರ ಮತ್ತು ಆರಾಮದಾಯಕ ವಾತಾವರಣದಲ್ಲಿ ಆನಂದದ ಕೆಲವು ಕ್ಷಣಗಳನ್ನು ಕಳೆಯುತ್ತಾ, ಮಸಾಜಿನ ಮಜವನ್ನು ಅನುಭವಿಸಲು ನನ್ನ ಮನಸ್ಸು ತವಕಿಸುತ್ತಿತ್ತು.

ಈ ಮಸಾಜು ನನ್ನ ನರ–ನಾಡಿಗಳಲ್ಲಿ ಸ್ಫೂರ್ತಿಯನ್ನು ತುಂಬುತ್ತಿತ್ತು. ಸದಾ ‘ಮಸಾಜ್ ಡೇ’ಗಾಗಿ ಕಾಯುತ್ತಿದ್ದೆ. ಅವಳು ತನ್ನ ಈ ಕೆಲಸ ಮತ್ತು ಗ್ರಾಹಕರ ಸೇವೆಯ ಬಗ್ಗೆ ಸಾಕಷ್ಟು ತಿಳಿದಿದ್ದಳು. ಅವಳು ತನ್ನ ಗ್ರಾಹಕರಿಗೆ, ‘ನೀವು ಚೆನ್ನಾಗಿ ಕಾಣುತ್ತೀರ’, ‘ನೀವು ತುಂಬಾ ಫ್ರೆಶ್ ಆಗಿರುವಂತಿದೆ’, ‘ನಿಮಗೆ ಗಡ್ಡ ತುಂಬಾ ಮ್ಯಾಚ್ ಆಗುತ್ತೆ’, ‘ನಿಮ್ಮ ಉಡುಪು ತುಂಬಾ ಚೆನ್ನಾಗಿದೆ, ಎಲ್ಲಿ ಕೊಂಡಿರಿ?’ – ಹೀಗೆ ಒಂದಲ್ಲ ಒಂದು ಕಾಂಪ್ಲಿಮೆಂಟ್ಸ್‌ಗಳನ್ನು ಹೇಳುತ್ತಿದ್ದಳು. ಅವಳು ಪಕ್ಕಾ ಉದ್ಯೋಗಸ್ಥೆಯಾಗಿದ್ದಳು.

ನಾನು ಅವಳಿಗೆ ಸಹಾಯವನ್ನು ಮಾಡಲೋಸುಗ ಅವಳ ಪಾರ್ಲರ್ ಬಗ್ಗೆ ಜಾಹೀರಾತು ಮತ್ತು ಪ್ರಶಂಸೆಯನ್ನು ಮಾಡಲಿಲ್ಲ. ನಾನು ವಾಸ್ತವವಾಗಿ ಅವಳ ಮಸಾಜ್ ಸೆಂಟರ್ ಮತ್ತು ಅವಳ ವ್ಯಕ್ತಿತ್ವದಿಂದ ತುಂಬಾ ಪ್ರಭಾವಿತನಾಗಿದ್ದೆ. ಅವಳ ಕೆಲಸಕ್ಕೆ ಉತ್ತಮ ಪ್ರಚಾರ ಸಿಗಬೇಕು. ಇಲ್ಲಿ, ‘ಹೆಸರಿಗೆ ಮಾತ್ರ ದೊಡ್ಡದು’ ಎಂಬ ಸಂಗತಿ ಇರಲಿಲ್ಲ. ನ್ಯಾನ್ಸಿ ನನಗಿಷ್ಟವಾಗುತ್ತಿದ್ದಳು. ನನಗೆ ಭಾರತ ಸದಾ ಆಕರ್ಷಣೆಯ ದೇಶವಾಗಿದೆ. ನನ್ನ ಮುತ್ತಜ್ಜಿ ಭಾರತದ ರಾಜವಂಶಕ್ಕೆ ಸೇರಿದ್ದಳು. ನನ್ನ ನಾಡಿಗಳಲ್ಲಿ ಭಾರತದ ರಕ್ತ ಹರಿಯುತ್ತಿದೆ. ನನ್ನ ಮಾಜಿ ಪತ್ನಿ ಭಾರತೀಯ ಮೂಲದವಳಾಗಿದ್ದಳು.

ಮಸಾಜ್ ಮಧ್ಯೆ ನಾವು ಪರಸ್ಪರ ಸಾಕಷ್ಟು ಹರಟುತ್ತಿದ್ದೆವು. ನಮ್ಮಿಬ್ಬರ ಮನಸ್ಸಿನ ಪರಿಸ್ಥಿತಿ ಸಮನಾಗಿತ್ತು. ಅವಳ ಮಸಾಜ್ ಪಾರ್ಲರ್‌ನಲ್ಲಿ ನಮ್ಮ ಪ್ರೇಮಾಂಕುರವಾಯಿತು. ಶೀಘ್ರವೇ ಅವಳೊಂದಿಗೆ ನನ್ನ ಸಂಬಂಧ ಓರ್ವ ಮಸಾಜ್ ಥೆರಪಿಸ್ಟ್‌ನಿಂದ ಓರ್ವ ಪ್ರಿಯಕರನ ರೂಪದಲ್ಲಿ ಬದಲಾಯಿತು. ಪ್ರೀತಿಗೆ ವಯಸ್ಸಿನ ಹಂಗಿರುವುದಿಲ್ಲ.

ನಾವಿಬ್ಬರೂ ದೀರ್ಘವಾಗಿ ಕಾಯಲಾಗದ ವಯಸ್ಸನ್ನು ಮೀರಿದ್ದೆವು. ನಾವು ಜೊತೆಜೊತೆಯಾಗಿ ಅಡ್ಡಾಡಲಾರಂಭಿಸಿದೆವು, ಒಟ್ಟಿಗೆ ಮಲಗಲಾರಂಭಿಸಿದೆವು... ನ್ಯಾನ್ಸಿ ಗರ್ಭಿಣಿಯಾದಳು. ಮಹಿಳೆಯೊಬ್ಬಳು ತನ್ನ ನಲವತ್ತೊಂಬತ್ತನೆಯ ವಯಸ್ಸಿನಲ್ಲಿ

